

ನುಡಿಯುತ್ತಿತ್ತು. ಈಗಾಗಲೇ ಹೊಟ್ಟೆ ತುಂಬಿಸಿಕೊಂಡ ಸಣ್ಣ ಮರಿಯೊಂದು ರೂಮಿನ ಉದ್ದ ಪರದೆಗಳನ್ನು ಉಯ್ಯಾಲೆ ಮಾಡಿಕೊಂಡು ಆಟವಾಡುತ್ತಿತ್ತು. ಪ್ರವಾಸಿ ಸ್ಥಳದ ಕೋತಿಗಳು ಜನರನ್ನು ಹೆದರಿಸಿ, ಬೆದರಿಸಿ ಪಳಗಿ ಪಂಟರ್ ಆಗಿರುತ್ತವೆ. ನಮ್ಮ ಧೈರ್ಯದ ಮಟ್ಟವೂ, ಪುಕ್ಕಲುತನದ ಪರಮಾವಧಿಯೂ ಅವಕ್ಕೆ ಗೊತ್ತಿದೆ. ಸದ್ಯಕ್ಕೆ ಕೋತಿಗಳ ಅಬ್ಬರದ ಮುಂದೆ ನನ್ನ ಆಟ ನಡೆಯದಾಗಿತ್ತು. ಕೊನೆಗೆ, ನನ್ನ ಕ್ಯಾಮೆರಾ ಬ್ಯಾಗಿನ ಮೇಲೆ ಕೋತಿಯೊಂದು ಹಾಕಿದ್ದ ತಾಜಾ ಲದ್ದಿ ನೋಡಿದ ಮೇಲೆ ನನ್ನ ಸಿಟ್ಟು ಮತ್ತಷ್ಟು ಉಕ್ಕಿ ಬಂತು.

ಗೆಳೆಯ ಸುದರ್ಶನ ನನ್ನ ಹಿಂದೆಯೇ ಬರುತ್ತಿದ್ದವನು ಅಲ್ಲೇ ಎಲ್ಲೋ ಹಿಂದೆ ಉಳಿದು ಯಾರ ಜೊತೆಗೋ ಮಾತಾಡುತ್ತಿದ್ದ. ಅವನಾದರೂ ಇದ್ದಿದ್ದರೆ ಚೆನ್ನಾಗಿತ್ತು. ಹಾಳಾದವನು ಬರಲಿಲ್ಲವಲ್ಲ ಎಂದು ಬೇಸರಗೊಂಡೆ. ಮುಂದಿನ ಬಾಗಿಲು ಮುಚ್ಚಿ ರೂಮಿನ ಹಿಂದೆ ಹೋಗಿ ಅವು ಎಲ್ಲಿಂದ ಒಳಗೆ ನುಗ್ಗಿರಬಹುದೆಂದು ತಲಾಶ್ ಮಾಡಿದೆ. ನೋಡಿದರೆ ಹಾಳಾದವು ಕಿಟಕಿಯ ಕಬ್ಬಿಣದ ಮೆಶ್ ಕಿತ್ತು ಬಿಸಾಕಿ ಸುರಂಗ ಮಾಡಿದ್ದವು. ಇನ್ನು ಹೊರಗಿನಿಂದ ಒಳ ನುಗ್ಗಲು ಸರತಿ ಸಾಲಲ್ಲಿದ್ದ ಬಾಕಿ ಮಂಗಗಳ ಕಡೆಗೆ ಕಲ್ಲು ಬೀರಿದೆ. ನನ್ನ ಅಬ್ಬರದ ಸದ್ದಿಗೆ ರೂಮಿನ ಒಳಗಿದ್ದ ಕೋತಿಗಳು ಪುಳುಪುಳು ಎಂದು ಸಂದಿಯಿಂದ ಹೊರಗೆ ಬರತೊಡಗಿದವು. ಮತ್ತೆ ಯಾವ ಮಂಗವೂ ರೂಮು ಪ್ರವೇಶಿಸದಂತೆ ಕಡ್ಡಿಪೊರಕೆ ಕೋಲು ಹಿಡಿದು ಬಾಯಿ ಮಾಡುತ್ತಾ ನಿಂತೆ. ನನ್ನ ಅಚ್ಚಗನ್ನಡ ಬೈಗುಳ ಕೇಳಿದ ಪಕ್ಕದ ರೂಮಿನ ಬೆಂಗಳೂರಿನ ಡಾಕ್ಟರು 'ಏನಾಯಿತು ಸರ್' ಎಂದು ಓಡಿಬಂದರು. ಅವರು ನಿನ್ನೆಯಷ್ಟೇ ಪರಿಚಯವಾಗಿದ್ದವರು. ಸಹಾಯಕ್ಕೆ ಒಬ್ಬರಾದರೂ ಒದಗಿ ಬಂದರಲ್ಲ ಎಂದು ಖುಷಿಯಿಂದ ಅವರತ್ತ ಆಸೆಗಣ್ಣಿಂದ ನೋಡಿದೆ. ಅವರೋ! ಮುಸಿಮುಸಿ ನಗುತ್ತಾ ದೂರ ನಿಂತು ಮೊಬೈಲಿನಲ್ಲಿ ನನ್ನ ಅವಸ್ಥೆಯ ಫೋಟೊ ತೆಗೆಯುತ್ತಿದ್ದರು.

'ಅಣ್ಣಾವ್ರ ಹೆಸರು ನಂಗಿಟ್ಟಿದ್ದಾರೆ. ನಾನು ಡಾ.ರಾಜಕುಮಾರ್ ಸರದೇಶಪಾಂಡೆ. ಈಕೆ ನನ್ನ ಹೆಂಡತಿ ಅಂಜನಾ. ಯಾಂತ್ರಿಕ ಕೆಲಸ ಹೆಚ್ಚಾಗಿ ಮನಸ್ಸು ಜಿಟ್ಟುಗಟ್ಟಿರುತ್ತೆ. ಸಿಟಿ ಶಬ್ದ, ಬಿಟ್ಟು ಕಾಡ ಪರಿಸರದಲ್ಲಿ ಓಡಾಡಿದ್ರೆ ನೆಮ್ಮದಿ, ಜೀವನೋತ್ಸಾಹ ಸಿಗುತ್ತೆ. ಎಲ್ಲೆಲ್ಲಿ ಹಸಿರಿದಿಯೋ ಅಲ್ಲಿ ನಾವು' ಎಂದರು.

'ಮಿದುಳಿನ ಆಪರೇಷನ್ ಮಾಡುವ ಡಾಕ್ಟರ್ ಒಬ್ಬರನ್ನು ಜೀವನದಲ್ಲಿ ನಾನು ನೋಡುತ್ತಿರುವುದು ಮೊದಲ ಸಲ' ಎಂದೆ. 'ನೀವೇನ್ ಬಿಡಿ ಸರ್ ನಾಲ್ಕು